

ಗಣೇಶ್ ಅರಳಿಕಟ್ಟಿ

# ಬೊಂಬಾಟ್ ಬೋಂಡ

■ ಮಂಜುಳ ಶ್ರೀಧರ ಶಾಸ್ತ್ರೀ

ಶಿವಪುರದಲ್ಲಿ ರಂಗಣ್ಣನೆಂಬ ಕೂಲಿ ಕಾರ್ಮಿಕನಿದ್ದ. ಹೆಂಡತಿ ಹಾಗೂ ಇಬ್ಬರು ಮಕ್ಕಳಿರುವ ಸುಂದರ ಸಂಸಾರ ಅವನದು. ಕೆಲಸವಿದ್ದರೆ ಹೋಗುವುದು, ಇಲ್ಲದಿರುವಾಗ ಸುಮ್ಮನೆ ಅಲೆದಾಡುವುದು ರಂಗಣ್ಣನ ಜಾಯಮಾನ. ಆದರೆ ಅವನಲ್ಲಿರುವ ಒಂದು ವೈಶಿಷ್ಟ್ಯವೆಂದರೆ, ಅವನ ಬಳಿ ಜಾಣ ಉಪಾಯಗಳ ಭಂಡಾರವೇ ಇತ್ತು. ಅದರಿಂದ ಊರಿನ ಎಷ್ಟೋ ಜನರ ಸಂಕಷ್ಟಗಳನ್ನು ಕ್ಷಣ ಮಾತ್ರದಲ್ಲಿ ಪರಿಹಾರ ಮಾಡಿಕೊಡುತ್ತಿದ್ದ. ಇದರಿಂದ ಏನಾದರೂ ಕಾಸು ಸಿಕ್ಕಿದ್ದರೆ ಸಂಸಾರಕ್ಕಾದರೂ ಆಗುತ್ತಿತ್ತು ಎಂದೆನ್ನುವ ಹೆಂಡತಿಗೆ, ‘ಸಾಕು ಸುಮ್ಮನಿರು ಅದೆಲ್ಲಾ ದೇವರು ಸೂಚಿಸಿದ ಕೆಲಸ. ಮಾಡುವುದು ನನ್ನ ಕರ್ತವ್ಯ. ಕಾಸು ತೆಗೆದುಕೊಳ್ಳಬಾರದು. ಆ ದೇವರೇ ದಾರಿ ತೋರುತ್ತಾನೆ’. ಎಂದು ಹೆಂಡತಿಯ ಬಾಯಿಯನ್ನು ಮುಚ್ಚಿಸುತ್ತಿದ್ದ.

ದೀಪಾವಳಿ ಹಬ್ಬ ಹತ್ತಿರ ಬರುತ್ತಿದ್ದಂತೆ ಮಕ್ಕಳು, ‘ಅಮ್ಮ ಈ ಸಾರಿಯಾದರೂ ಹಬ್ಬಕ್ಕೆ ಉದ್ದಿನ ಬೋಂಡ ಮಾಡು’ ಎಂದು ಆಸೆಯಿಂದ ಕೇಳಿದಾಗ, ‘ನಿಮ್ಮಪ್ಪನ ಸಂಪಾದನೆಯಲ್ಲಿ ದಿನಾಲೂ ಗಂಜಿಗೂ ಹೊಂದಾಣಿಕೆ ಮಾಡಬೇಕಾಗಿರುವಾಗ ಬೋಂಡಾದ ಕನಸು ಕಾಣ್ತೀರ? ಸುಮ್ಮನೆ ಹೋಗಿ ಆಡ್ಕೊಳ್ಳಿ’. ಎಂದು ಸಾಗ ಹಾಕಿದಳು.

ಮರೆಯಲ್ಲಿ ನಿಂತು ಕೇಳಿದ ರಂಗಣ್ಣ ಇದಕ್ಕೆನಾದರೂ ಸೂಕ್ತ ಉಪಾಯ ನೋಡಬೇಕೆಂದು ಯೋಚಿಸತೊಡಗಿದ. ದೀಪಾವಳಿಯ ಹಿಂದಿನ ದಿನ ಮಗನನ್ನು ಕರೆದು ‘ಮಗ, ಅಮ್ಮನಲ್ಲಿ ನಿನ್ನ ತಲೆಗೊಂದು ಮುಂಡಾಸು ಕಟ್ಟಲು ಹೇಳು. ಹಾಗೆಯೇ 2 ಡಬ್ಬಿಗಳನ್ನು ಕೊಡಲು ಹೇಳು. ಇಬ್ಬರೂ ಅಂಗಡಿಗೆ ಹೋಗಿ ಬೋಂಡಾಗೆ ಬೇಕಾಗುವ ಸಾಮಾನು ತರೋಣ’ ಎಂದ.

ಜಲಜಾ ‘ಈ ಸಾಮಾನು ತರಲು ದುಡ್ಡು ಎಲ್ಲಿದೆ. ಸುಮ್ನೆ ಮಕ್ಕಳಿಗೆ ಆಸೆ ತೋರಿಸಬೇಡಿ’. ಎಂದಳು ಖಾರವಾಗಿ. ಜಲಜಾಳ ಮಾತನ್ನು ಧಿಕ್ಕರಿಸಿ, ಇಬ್ಬರೂ ಶೆಟ್ಟರ ಅಂಗಡಿಗೆ ಹೋದರು. ಶೆಟ್ಟರ ಅಂಗಡಿ ಎಂದರೆ ಕೇಳಬೇಕೆ? ವಿಧ ವಿಧವಾದ ಸಾಮಾನುಗಳನ್ನು ವಿವಿಧ ದರಗಳಿಗನುಸಾರವಾಗಿ ಜೋಡಿಸಿಟ್ಟು, ಗಿರಾಕಿಗಳು ಪ್ರತಿಯೊಂದನ್ನು ಮುಟ್ಟಿ ನೋಡಿ ಕೊಳ್ಳಲು ಅನುಕೂಲವಾಗುವಂತೆ ವ್ಯವಸ್ಥೆಗೊಳಿಸಿದ್ದರು. ರಂಗಣ್ಣ ಮತ್ತು ಮಗನೂ ಅಂಗಡಿಯನ್ನು ಹೊಕ್ಕು ಡಬ್ಬಿಗಳೆರಡನ್ನು ತುಂಬಿಸಿಕೊಂಡು ಮನೆಗೆ ಬಂದರು. ಮನೆಯೊಳಕ್ಕೆ ಕಾಲಿಡುತ್ತಿದ್ದಂತೆ ‘ಅಮ್ಮ ನೋಡು ಬೋಂಡಕ್ಕೆ ಬೇಕಾದ ಉದ್ದಿನ ಬೇಳೆ ಮತ್ತು ಎಣ್ಣೆಯನ್ನು ತಂದಿದ್ದೇವೆ. ನೀನು ಮಾಡೋದೊಂದೆ ಬಾಕಿ. ನಾಳೆ ಹಬ್ಬಕ್ಕೆ ತುಂಬಾ ಬೋಂಡ ತಿನ್ನಬಹುದು ಅಲ್ವಾ?’ ಎಂದ.

ಜಲಜಾ ‘ಮಗಾ ಇದನ್ನೆಲ್ಲಾ ಅಪ್ಪ ಸಾಲ ಮಾಡಿ ತಂದ್ರಾ? ಈಗಾಗಲೇ ಸಾಲದ ಪಟ್ಟಿ ಹನುಮಂತನ ಬಾಲದಷ್ಟಿದೆ. ಶೆಟ್ರು ಸಾಲಕ್ಕೆ ಕೊಟ್ರಾ? ಎಂಬ ಪ್ರಶ್ನೆಗಳ ಸುರಿಮಳೆಗೈದಳು’.

ಅಷ್ಟರಲ್ಲಿ ರಂಗಣ್ಣ ‘ನೋಡು ಜಲಜಾ, ನಿನ್ನ ಗಂಡ ಅಂದರೆ ಏನೆಂದುಕೊಂಡಿದ್ದಿ, ನಾನಿವತ್ತು ಖಂಡಿತ ಸಾಲ ಮಾಡಿ ತಂದಿಲ್ಲ. ನನ್ನ ಬೊಂಬಾಟ್ ಉಪಾಯದಿಂದ ತಂದಿದ್ದು’ ಎಂದ.

ಜಲಜಾ ಪ್ರಶ್ನಾರ್ಥಕವಾಗಿ ನೋಡಿದಾಗ ಮತ್ತೆ ಮುಂದುವರಿಸಿದ, ‘ನಾನು ಹೋಗುವಾಗಲೇ ಒದ್ದೆಯಾದ ಮುಂಡಾಸನ್ನು ತಲೆಗೆ ಸುತ್ತಿಕೊಂಡು ಹೋಗಿದ್ದೆ. ಅಂಗಡಿಯಲ್ಲಿ ಬೇಳೆಗಳ ವಿಧಗಳನ್ನು ಪರೀಕ್ಷಿಸುವ ನೆಪದಲ್ಲಿ ಬಗ್ಗಿದಾಗ ಮುಂಡಾಸ್ ಬೇಳೆಯ ಚೀಲಕ್ಕೆ ಬಿತ್ತು. ಆಕಸ್ಮಿಕವಾಗಿ ಬಿತ್ತು ಅಂತ ಹೇಳಿ ತೆಗೆದುಕೊಳ್ಳುವಾಗ, ಬೇಳೆಯೊಳಗೆ ಮುಂಡಾಸ್ ನ್ನು ಹೊರಳಿಸಿ ತೆಗೆದು ನಮ್ಮ ಡಬ್ಬಕ್ಕೆ ಹಾಕಿದೆ ಅಷ್ಟೇ. ನೋಡು! ಕೊಡವಿದಾಗ ಒಂದುವರೆ ಸಿದ್ದಿ ಉದ್ದಿನ ಬೇಳೆ ಇರಬಹುದು.

ಮತ್ತೆ ಎಣ್ಣೆ? ಎಂದು ಕೇಳಿದಳು ಜಲಜಾ.

ನಿನ್ನ ಮಗನನ್ನು ಕರೆದುಕೊಂಡು ಹೋಗಿದ್ದೇ ಅದಕ್ಕೆ. ಮೊದಲೇ ರೆಡಿಯಾದ ನಮ್ಮ ವ್ಯವಸ್ಥೆಯಂತೆ, ಮಗ ಆ ಕಡೆ, ಈ ಕಡೆ ಓಡಾಡಿ ಅವನ ಮುಂಡಾಸನ್ನು ಎಣ್ಣೆ ಡಬ್ಬಿಯೊಳಗೆ ಬೀಳಿಸಿಕೊಂಡು ನನ್ನನ್ನು ಕರೆದ. ಶೆಟ್ಟರೆದುರು ಮಗನಿಗೊಂದಷ್ಟು ಬೈದು ಎಣ್ಣೆಯೊಳಗೆ ಮುಳುಗಿದ ಮುಂಡಾಸನ್ನು ನಮ್ಮ ಇನ್ನೊಂದು ಡಬ್ಬಿಯೊಳಗೆ ಹಾಕಿಕೊಂಡು ಬಂದೆ ಅಷ್ಟೇ! ಇಲ್ಲಿ ನೋಡು ಸಿದ್ದಿಗಿಂತ ಮೇಲೇ ಇದೆ. ಸಾಕಲ್ವಾ ಬೋಂಡಕ್ಕೆ. ಇನ್ನೇನು ನಾಳೆ ದೀಪಾವಳಿಗೆ ಬೋಂಡಾಗಳ ಸುರಿಮಳೆಯೇ’! ಎಂದು ಮಕ್ಕಳೊಂದಿಗೆ ಕುಣಿದಾಡತೊಡಗಿದ ರಂಗಣ್ಣ. ■